ಸಂಖ್ಯೆ: ಡಿಟಿಇ 4 ಡಿಇಕ್ಯೂ(1) 2013 ದಿ: 26-09-2014

**ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು, ಇವರ ಕಛೇರಿಯ ನಡವಳಿಗಳು**

ವಿಷಯ: ಶ್ರೀ ಬದ್ರುದ್ದೀನ್ ಷರೀಫ್, ದ್ವಿತೀಯ ದರ್ಜೆ ಸಹಾಯಕರು, ಸರ್ಕಾರಿ ಪಾಲಿಟೆಕ್ನಿಕ್, ಕೆ.ಜಿ.ಎಫ್, ಇವರು ತನ್ನ ಪತ್ನಿ ಶ್ರೀಮತಿ ಸೈಯದ್ ಅಸಿಮ ಅಂಜುಮ್ ಇವರಿಗೆ ವರದಕ್ಷಿಣೆ ಕಿರುಕುಳ ನೀಡಿರುತ್ತಾರೆ ಎಂಬ ದೂರಿನ ಬಗ್ಗೆ.

ಓದಲಾಗಿದೆ:
1. ಶ್ರೀಮತಿ ಸೈಯದ್ ಅಸಿಮ ಅಂಜುಮ್ ಇವರು ನಿರ್ದೇಶಕರಿಗೆ ಸಲ್ಲಿಸಿರುವ ದೂರಿನ ಪತ್ರ ದಿನಾಂಕ: 9.05.2013
2. ಶ್ರೀಮತಿ ಸೈಯದ್ ಅಸಿಮ ಅಂಜುಮ್ ಇವರು ಸಬ್‌ಇನ್ಸ್‌ಪೆಕ್ಟರ್ ಆಫ್ ಪೋಲಿಸ್, ಕೋಲಾರ ನಗರ ಪೋಲಿಸ್ ಸ್ಟೇಷನ್, ಕೋಲಾರ ಇವರಿಗೆ ಸಲ್ಲಿಸಿರುವ ದೂರಿನ ಪತ್ರ ದಿನಾಂಕ: 6.05.2013
3. ಕೋಲಾರ ನಗರ ಪೋಲಿಸ್ ಸ್ಟೇಷನ್ ಎಫ್‌ಐಆರ್ ಸಂಖ್ಯೆ: 0136/2013, ದಿ:6.5.2013
4. ಪೋಲಿಸ್ ವೃತ್ತ ನಿರೀಕ್ಷಕರವರ ಕಛೇರಿ ಇವರು ಪ್ರಿನ್ಸಿಪಾಲರಿಗೆ ಬರೆದ ಪತ್ರ ದಿ:16.5.2013
5. ಪ್ರಿನ್ಸಿಪಾಲರು, ಸ.ಪಾ ಕೆ.ಜಿ.ಎಫ್ ಇವರು ನಿರ್ದೇಶಕರಿಗೆ ಬರೆದ ಪತ್ರ
6. ಶ್ರೀ ಬದ್ರುದ್ದೀನ್ ಷರೀಪ್ ಇವರನ್ನು ಅಮಾನತ್ತುಗೊಳಿಸಿದ ದಿನಾಂಕ: 21.05.2013
7. ದೋಷಾರೋಪಣಾ ಪಟ್ಟಿ ದಿನಾಂಕ; 07.08.2013
8. ಶ್ರೀ ಎಸ್.ಇಂದುಧರ, ನಿವೃತ್ತ ಜಿಲ್ಲಾ ನ್ಯಾಯಾಧೀಶರು ಇವರನ್ನು ನೇಮಕ ಮಾಡಿದ ದಿನಾಂಕ: 18.09.2013
9. ನ್ಯಾಯಾಧೀಶರ ಅಂತಿಮ ವಿಚಾರಣಾ ವರದಿ ದಿನಾಂಕ: 28.03.2014
10. 2ನೇ ಕಾರಣ ಕೇಳುವ ನೋಟಿಸು ದಿನಾಂಕ: 29.03.2014
11. 2ನೇ ಕಾರಣ ಕೇಳುವ ನೋಟಿಸಿಗೆ ಉತ್ತರ ಸಲ್ಲಿಸಿದ ದಿನಾಂಕ: 14.05.2014

**ಪ್ರಸ್ತಾವನೆ:**

ಸರ್ಕಾರಿ ಪಾಲಿಟೆಕ್ನಿಕ್, ಕೆ.ಜಿ.ಎಫ್ ಇಲ್ಲಿ ದ್ವಿತೀಯ ದರ್ಜೆ ಸಹಾಯಕರು (ಹಾಲಿ ಅಮಾನತ್ತಿನಲ್ಲಿರುವ) ಶ್ರೀ ಬದ್ರುದ್ದೀನ್ ಷರೀಫ್, ಇವರ ವಿರುದ್ಧ ಅವರ ಪತ್ನಿ ಶ್ರೀಮತಿ ಸೈಯದ್ ಆಸಿಮ ಅಂಜುಮ್ ಇವರು ನನಗೆ ವರದಕ್ಷಿಣೆ ಕಿರುಕುಳ ನೀಡುತ್ತಿರುತ್ತಾರೆ ಎಂದು ದಿ: 06-05-2013 ರಂದು ಕೋಲಾರದ ವೃತ್ತ ನಿರೀಕ್ಷಕರವರ ಕಛೇರಿಗೆ ಲಿಖಿತವಾಗಿ ದೂರು ನೀಡಿ ನಾನು ಶ್ರೀ ಬದ್ರುದ್ದೀನ್ ಷರೀಫ್ ಇವರನ್ನು ದಿ: 12-07-2012 ರಂದು ವಿವಾಹ ಆಗಿದ್ದೇನೆ. ಕೆಲವು ದಿನಗಳ ನಂತರ ನನ್ನ ಗಂಡ, ನನ್ನ ಅತ್ತೆ ಶ್ರೀಮತಿ ವಹಿದಾ ಬೇಗಂ, ನನ್ನ ಗಂಡನ ತಂಗಿ·ಹರ್ಷಿಯಾ ಮತ್ತು ನನ್ನ ಗಂಡನ ಚಿಕ್ಕಮ್ಮ ಜಮರುತ್ ಬೇಗಂ ಹಾಗೂ ಅವರ ಕುಟುಂಬದ ಸದಸ್ಯರು ನನ್ನನ್ನು ತುಚ್ಛವಾದ ಮಾತುಗಳಿಂದ ಪ್ರತಿದಿನ ಬೈಯುವುದು ಮತ್ತು ಮಾನಸಿಕವಾಗಿ ಹಿಂಸೆ ನೀಡುವುದು ದೈಹಿಕವಾಗಿ ಹಲ್ಲೆ ನಡೆಸುವುದು ಮತ್ತು ತಂದೆ ತಾಯಿ ಮನೆಯಿಂದ ವರದಕ್ಷಿಣೆ ಹಣವನ್ನು ತರಲು ಒತ್ತಾಯ ಪಡಿಸಿರುತ್ತಾರೆ. ಅಲ್ಲದೆ ನಾನು ಎಂ.ಎ ಎಂಇಡಿ ಪಾಸು ಮಾಡಿ ಐಬಿಎಂ ಪಿಯು ಕಾಲೇಜ್, ಬಂಗಾರಪೇಟೆಯಲ್ಲಿ 2 ವರ್ಷಗಳಿಂದ ಉಪನ್ಯಾಸಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ಈಗ ನನ್ನ ಅತ್ತೆ ಮನೆಯವರು ನನ್ನ ಈ ಕೆಲಸವನ್ನು ಬಿಟ್ಟು ಬಿಡು ಎಂದು ಒತ್ತಾಯ ಮಾಡುತ್ತಿದ್ದಾರೆ. ಈ ದಿನ ಬೆಳಗ್ಗೆ ನನ್ನ ಗಂಡ, ಅತ್ತೆ, ತಂಗಿ ಮತ್ತು ನನ್ನ ಗಂಡನ ಚಿಕ್ಕಮ್ಮ ಮತ್ತು ದೊಡ್ಡಪ್ಪ ಸೈಯದ್ ಮುನೀರ್ ಅಹಮದ್ ಇವರು ನನ್ನ ಮೇಲೆ ಹಲ್ಲೆ ಮಾಡಿ ನನ್ನ ಮಾಂಗಲ್ಯವನ್ನು ಕಿತ್ತುಕೊಂಡಿರುತ್ತಾರೆ ಮತ್ತು ಹಲ್ಲೆ ಮಾಡಿ ನನ್ನ ಎಡಗೈ ಮೇಲೆ ಗಾಯ ಮಾಡಿರುತ್ತಾರೆ. ನನ್ನ ಗಂಡನ ಮನೆಯಲ್ಲಿದ್ದರೆ ನನಗೆ ಪ್ರಾಣಾಪಾಯ ಇದೆ ಕಾರಣ ನನ್ನ ಗಂಡ ಮತ್ತು ಅವರ ಕುಟುಂಬದವರು ನನ್ನನ್ನು ಕೊಲ್ಲುತ್ತೇನೆಂದು ಹೇಳಿರುತ್ತಾರೆ. ಆದ್ದರಿಂದ ತಾವು ಅವರ ಮೇಲೆ ಕಠಿಣ ಕ್ರಮ ಕೈಗೊಂಡು ನನಗೆ ಕಾನೂನು ರೀತಿ ನ್ಯಾಯ ಒದಗಿಸಬೇಕೆಂದು ವಿನಂತಿಸುತ್ತಾ ಸಬ್ ಇನ್ಸ್‌ಪೆಕ್ಟರ್ ಆಫ್ ಪೋಲಿಸ್ ಕೋಲಾರ ನಗರ ಪೋಲಿಸ್ ಸ್ಟೇಷನ್ ಕೋಲಾರ ಇವರಿಗೆ ದೂರು ನೀಡಿರುತ್ತಾರೆ.

ಸದರಿ ಪ್ರಕರಣವನ್ನು ಕೈಗೆತ್ತಿಕೊಂಡ ಪೋಲಿಸ್ ಇನ್ಸ್‌ಪೆಕ್ಟರ್‌ರವರು ದಿನಾಂಕ: 06-05-2013 ರಂದು ಸಂಜೆ 7-00 ಗಂಟೆಯಲ್ಲಿ ನಿಮ್ಮನ್ನು ದಸ್ತಗಿರಿ ಮಾಡಿ ನ್ಯಾಯಾಲಯದ ಮುಂದೆ ಹಾಜರುಪಡಿಸಿದ್ದು ನ್ಯಾಯಾಲಯವು ನಿಮ್ಮನ್ನು ನ್ಯಾಯಾಂಗ ಬಂಧನಕ್ಕೆ ಒಳಪಡಿಸಿರುತ್ತದೆ. 06-05-2013 ರಿಂದ 9-05-2013 ವರೆಗೆ ನ್ಯಾಯಾಂಗ ಬಂಧನದಲ್ಲಿದ್ದು ದಿನಾಂಕ: 09-05-2013 ರಂದು ನ್ಯಾಯಾಲಯದ ಜಾಮೀನಿನ ಮೇಲೆ ಬಿಡುಗಡೆ ಆಗಿರುತ್ತೀರಿ ಎಂದು ಪೋಲಿಸ್ ವೃತ್ತ ನಿರೀಕ್ಷಕರವರ ಕಛೇರಿಯಿಂದ ಲಿಖಿತ ಪತ್ರದ ಮುಖೇನ ತಿಳಿದುಬಂದಿರುತ್ತದೆ. ಸದರಿ ಪ್ರಕರಣದ ಬಗ್ಗೆ ಪ್ರಥಮ ವರ್ತಮಾನ ವರದಿ ಸಹ ಆಗಿರುತ್ತದೆ(FIR). ಇವರು ಒಬ್ಬ ಸರ್ಕಾರಿ ನೌಕರರಿಗೆ ತರವಲ್ಲದ ರೀತಿಯಲ್ಲಿ ವರ್ತಿಸಿ ಕರ್ನಾಟಕ ನಾಗರೀಕ ಸೇವಾ ನಡತೆ [ವರ್ತನೆ] ನಿಯಮಗಳು

1966 ರ ನಿಯಮ 3 (1)ರ ಉಪನಿಯಮ (iii) ಮತ್ತು 14 ಎ ಮತ್ತು 29 ಸಿ ನ್ನು ಉಲ್ಲಂಘಿಸಿ ಕ್ರಿಮಿನಲ್ ಮೊಕದ್ದಮೆಗೆ ಒಳಗಾಗಿರುತ್ತಾರೆ.

ಉಲ್ಲೇಖ(7)ರ ಪತ್ರದಲ್ಲಿ ಸದರಿಯವರಿಗೆ ದೋಷಾರೋಪಣಾ ಪಟ್ಟಿಯನ್ನು ಜಾರಿಗೊಳಿಸಲಾಗಿತ್ತು. ಅವರು ನೀಡಿದ ವಿವರಣೆಯನ್ನು ಒಪ್ಪದೇ ಶಿಸ್ತುಪ್ರಾಧಿಕಾರವು ಈ ಪ್ರಕರಣದ ಬಗ್ಗೆ ಇಲಾಖಾ ಹಂತದಲ್ಲಿ ನಿಯಮಾನುಸಾರ ಇಲಾಖಾ ವಿಚಾರಣೆ ನಡೆಸಿ ವರದಿ ಸಲ್ಲಿಸಲು ಶ್ರೀ ಎಸ್.ಇಂದುಧರ, ನಿವೃತ್ತ ನ್ಯಾಯಾಧೀಶರು ಇವರನ್ನು ವಿಚಾರಣಾಧಿಕಾರಿಯನ್ನಾಗಿ ನೇಮಿಸಲಾಗಿ ಅದರಂತೆ ಸದರಿ ವಿಚಾರಣಾಧಿಕಾರಿಗಳು ವಿಚಾರಣೆ ನಡೆಸಿ ವರದಿ ಸಲ್ಲಿಸಿರುತ್ತಾರೆ. ಸದರಿ ವರದಿಯಲ್ಲಿ ಶ್ರೀ ಬದ್ರುದ್ದೀನ್ ಷರೀಫ್ ದ್ವಿತೀಯ ದರ್ಜೆ ಸಹಾಯಕರು ( ಹಾಲಿ ಅಮಾನತ್ತಿನಲ್ಲಿರುವ ) ಇವರ ಮೇಲೆ ಹೊರಿಸಲಾದ ಆರೋಪ ರುಜುವಾತಾಗಿರುತ್ತದೆ ಎಂದು ವರದಿಯಲ್ಲಿ ಉಲ್ಲೇಖಿಸಿರುತ್ತಾರೆ. ಸದರಿ ವರದಿಯನ್ನು ಲಗತ್ತಿಸಿ ನಿಯಮಾನುಸಾರ ದಿನಾಂಕ: 29.03.2014 ರಂದು ಜಾರಿ ಮಾಡಿ ಅವರ ಲಿಖಿತ ಸಮಜಾಯಿಷಿಯನ್ನು ಸಲ್ಲಿಸಲು 30 ದಿನಗಳ ಕಾಲಾವಕಾಶ ನೀಡಲಾಗಿತ್ತು. ಅದರಂತೆ ಆರೋಪಿತರು ದಿನಾಂಕ: 14.05.2014 ರಂದು ತಮ್ಮ ಲಿಖಿತ ಸಮಜಾಯಿಷಿಯನ್ನು ಸಲ್ಲಿಸಿರುತ್ತಾರೆ. ಸದರಿ ಸಮಜಾಯಿಷಿಯನ್ನು ಪರಿಶೀಲಿಸಿದ ಶಿಸ್ತು ಪ್ರಾಧಿಕಾರವು ಅವರ ಸಮಜಾಯಿಷಿಯನ್ನು ಒಪ್ಪದೆ ಕರ್ನಾಟಕ ನಾಗರೀಕ ಸೇವಾ ನಡತೆ(ವರ್ತನೆ)ನಿಯಮಗಳು 1966ರ ನಿಯಮ 3 ಉಪನಿಯಮ 1 (i) (ii) (iii) ನ್ನು ಮತ್ತು ನಿಯಮ 14(ಎ), 29(ಸಿ) ಇವುಗಳನ್ನು ಉಲ್ಲಂಘಿಸಿದ ಆರೋಪದ ಮೇರೆಗೆ ಹಾಗೂ ನಿವೃತ್ತ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ಅಂತಿಮ ವಿಚಾರಣಾ ವರದಿಯನ್ನು ಅಂಗೀಕರಿಸಿ ಈ ಕೆಳಕಂಡಂತೆ ಆದೇಶ ಹೊರಡಿಸಲಾಗಿದೆ.

**ಆದೇಶ ಸಂಖ್ಯೆ: ಡಿಟಿಇ 4 ಡಿಇಕ್ಯೂ(1)2013 ದಿನಾಂಕ: 26.09.2014 /2296**

ಸರ್ಕಾರಿ ಪಾಲಿಟೆಕ್ನಿಕ್, ಕೆ.ಜಿ.ಎಫ್ ಇಲ್ಲಿ ದ್ವಿತೀಯ ದರ್ಜೆ ಸಹಾಯಕರಾಗಿ ಕಾರ್ಯನಿರ್ವಹಿಸುತ್ತಿರುವ ಶ್ರೀ ಬದ್ರುದ್ದೀನ್ ಷರೀಫ್ (ಹಾಲಿ ಅಮಾನತ್ತಿನಲ್ಲಿರುವ) ಇವರು ತಮ್ಮ ಪತ್ನಿಗೆ ವರದಕ್ಷಿಣೆ ಕಿರುಕುಳ ನೀಡುತ್ತಿರುತ್ತಾರೆ ಎಂಬ ಆರೋಪ ಸಾಬೀತಾದ ಮೇರೆಗೆ ಕರ್ನಾಟಕ ನಾಗರೀಕ ಸೇವಾ ನಡತೆ(ವರ್ತನೆ)ನಿಯಮಗಳು 1966ರ ನಿಯಮ 3 ಉಪನಿಯಮ 1 (i) (ii) (iii) ನ್ನು ಮತ್ತು ನಿಯಮ 14(ಎ), 29(ಸಿ) ಇವುಗಳನ್ನು ಉಲ್ಲಂಘಿಸಿದ್ದರಿಂದ ಕರ್ನಾಟಕ ಸರ್ಕಾರಿ ಸೇವಾ [ವರ್ಗೀಕರಣ ನಿಯಂತ್ರಣ ಹಾಗೂ ಮೇಲ್ಮನವಿ] ನಿಯಮಾವಳಿ 1957 ರ ನಿಯಮ 8(vi)] ರಂತೆ ಸದರಿಯವರನ್ನು ತಕ್ಷಣದಿಂದ ಜಾರಿಗೆ ಬರುವಂತೆ <u>ಸರ್ಕಾರಿ ಸೇವೆಯಿಂದ ಕಡ್ಡಾಯ ನಿವೃತ್ತಿಗೊಳಿಸಿ</u> ಆದೇಶಿಸಲಾಗಿದೆ.

ನಿರ್ದೇಶಕರು
ಹಾಗೂ ನೇಮಕಾತಿ ಮತ್ತು ಶಿಸ್ತು ಪ್ರಾಧಿಕಾರ
ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು

ಇವರಿಗೆ,

1. ಶ್ರೀ ಬದ್ರುದ್ದೀನ್ ಷರೀಫ್, ದ್ವಿತೀಯ ದರ್ಜೆ ಸಹಾಯಕರು, ಸರ್ಕಾರಿ ಪಾಲಿಟೆಕ್ನಿಕ್, ಕೆ.ಜಿ.ಎಫ್ (ಪ್ರಿನ್ಸಿಪಾಲರ ಮುಖಾಂತರ)
2. ಸಂಕಲನಕಾರರು, ಕರ್ನಾಟಕ ರಾಜ್ಯಪತ್ರ, ಬೆಂಗಳೂರು ಮುಂದಿನ ರಾಜ್ಯಪತ್ರದಲ್ಲಿ ಪ್ರಕಟಿಸಿ ಅದರ 10 ಪ್ರತಿಗಳನ್ನು, ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರಿಗೆ ಕಳುಹಿಸುವುದು.

<u>ಪ್ರತಿ ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ</u>

1. ಪ್ರಧಾನ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ(ಉನ್ನತ ಶಿಕ್ಷಣ), ಬಹುಮಹಡಿ ಕಟ್ಟಡ, ಬೆಂಗಳೂರು
2. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು
3. ನಿರ್ದೇಶಕರು, ಖಜಾನೆ ಇಲಾಖೆ, ಕೋಲಾರ
4. ಮಾನ್ಯ ಉನ್ನತ ಶಿಕ್ಷಣ ಸಚಿವರ ಆಪ್ತ ಕಾರ್ಯದರ್ಶಿ, ಬೆಂಗಳೂರು
5. ಪತ್ರಿಕಾ ಕಾರ್ಯದರ್ಶಿಗಳು, ಮಾನ್ಯ ಮುಖ್ಯಮಂತ್ರಿಗಳ ಕಾರ್ಯಾಲಯ, ವಿಕಾಸಸೌಧ, ಬೆಂಗಳೂರು
6. ಜಂಟಿ ನಿರ್ದೇಶಕರು(ಆಡಳಿತ), ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು
5. ಪ್ರಾಂಶುಪಾಲರು,. ಸರ್ಕಾರಿ ಪಾಲಿಟೆಕ್ನಿಕ್, ಕೆ.ಜಿ.ಎಫ್ ಇವರು ಸದರಿಯವರನ್ನು ಕಡ್ಡಾಯ ನಿವೃತ್ತಿಗೊಳಿಸಿರುವ ಪ್ರಯುಕ್ತ ಕೂಡಲೇ ಇವರನ್ನು ಕಾರ್ಯವಿಮುಕ್ತಿಗೊಳಿಸಲು ಸೂಕ್ತ ಕ್ರಮ ಕೈಗೊಂಡು ವರದಿ ಕಳುಹಿಸುವುದು.
6. ನಿರ್ದೇಶನಾಲಯದ ಆಪ್ತ ಶಾಖೆಗೆ
7. ಸಾರ್ವಜನಿಕ ಸಂಪರ್ಕಾಧಿಕಾರಿ, ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು.
8. ಇ-ಆಡಳಿತ, ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು ಇಲಾಖೆಯ ವೆಬ್‌ಸೈಟಿಗೆ ಪ್ರಕಟಿಸಲು
9. ಇಎಸ್‌ಟಿ(6), ಇಎಸ್‌ಟಿ8(ಬಿ), ಇಎಸ್‌ಟಿ(9) ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು.

Deq-Compulsory Retirement